(ಅ) ಹೌದು.

(ಆ) ಅಂದಾಜು ವೆಚ್ಚ 4,200-00 ಕೋಟಿ ರೂಪಾಯಿಗಳು (1994ರ ಬೆಲೆಗಳ ಆಧಾರದ ಮೇಲೆ)

(ಇ) 1,050 ಕೋಟಿ ರೂಪಾಯಿಗಳು

(ಈ) ಈ ಯೋಜನೆಯು 1999ರಲ್ಲಿ ಮಧ್ಯಭಾಗದಲ್ಲಿ ಪ್ರಾರಂಭಗೊಂಡು 2007ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

(ಉ) 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನಾ ಆಯೋಗದ ಒಪ್ಪಿಗೆಗೆ ಒಳಪಟ್ಟು 67 ಕೋಟಿ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಲಾಗಿದೆಯೆಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ಬೆಂಗಳೂರು ಕೇಂದ್ರ ಕಾರಗೃಹವನ್ನು ಸ್ಥಳಾಂತರಿಸುವುದು.

260 (342) ಶ್ರೀ ರಾಮಲಿಂಗಾರೆಡ್ಡಿ (ಜಯನಗರ):

ಮಾನ್ಯ ಕಾರಾಗೃಹ, ಗೃಹರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರಿನ ಬಳಿ ಪರಪ್ಪನ ಅಗ್ರಹಾರದಲ್ಲಿ ಹೊಸದಾಗಿ ಕೇಂದ್ರ ಕಾರಾಗೃಹವನ್ನು ನಿರ್ಮಿಸಲಾಗಿದೆಯೇ;

(ಆ) ಹಾಗಿದ್ದಲ್ಲಿ ಈ ಹೊಸ ಕಾರಾಗೃಹಕ್ಕೆ ಯಾವಾಗ ಈಗಿರುವ ಖೈದಿಗಳನ್ನು ಸ್ಥಳಾಂತರಿಸಲಾಗುವುದು;

(ಇ) ಈಗಿರುವ ಕೇಂದ್ರ ಕಾರಾಗೃಹವನ್ನು ಮಕ್ಕಳ ಉದ್ಯಾನವನವನ್ನಾಗಿ ಪರಿವರ್ತಿಸಲಾಗುವುದೇ;

(ಈ) ಹೊಸದಾಗಿ ನಿರ್ಮಿಸಿರುವ ಕಾರಾಗೃಹಕ್ಕೆ ತಗುಲಿದ ಒಟ್ಟು ವೆಚ್ಚವೆಷ್ಟು?

ಶ್ರೀ ಎ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು.)

(ಅ) ಹೌದು.

(ಆ) ಸದ್ಯದಲ್ಲಿಯೇ ಹಂತ ಹಂತವಾಗಿ ಶಿಕ್ಷೆಗೊಳಗಾದ ಬಂದಿಗಳನ್ನು ಸದರಿ ಕಾರಾಗೃಹಕ್ಕೆ ಸ್ಥಳಾಂತರಿಸಲಾಗುವುದು.

(ಇ) ಇಲ್ಲ.

(ಈ) ಡಿಸೆಂಬರ್ 1996 ರವರೆವಿಗೆ 11.50 ಕೋಟಿ ರೂ.ಗಳು ವೆಚ್ಚವಾಗಿರುತ್ತದೆ.

THEFTS AND BURGLARIES in THE STATE.

261 (160) Sri. H.Shivappa (Harihara):

will the Minister of state for Home and Wakfs. be pleased to State:-

a) the total number of he inouscases chargesheeted in the State in general and particularly in Chitradurga District for the last threeyears;

b) Number of thefts and burgalaries committed in the State during last 3 years;